# ಬೆಳಕಿನ ಸಂಚಲನ

ಸಂಪುಟ 12, ಸಂಚಿಕೆ 2 ದ್ವೈಮಾಸಿಕ ವಾರ್ತಾಪತ್ರ ಮಾರ್ಚ್–ಏಪ್ರಿಲ್ 2024



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿ–ರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಆಗಸ್ಟ್ 5, 2012)

**ಅನು: ಸುನಿಲ್ ಬಿ**

ಲೈಟ್ ಚಾನಲಿಂಗ್ ಒಂದರಿಂದಲೇ ನಮ್ಮ ಸಂಪೂರ್ಣ ಮುಕ್ತಿ ಸಾಧ್ಯವೇ ಅಥವಾ ನಾವು ಇನ್ನೂ ಮುಂದುವರಿದ ತಂತ್ರಗಳ ಮೊರೆ ಹೋಗಬೇಕೇ?

ನಮ್ಮನ್ನು ಮುಕ್ತಿಗೆ ಕರೆದೊಯ್ಯಲು ಲೈಟ್ ಚಾನಲಿಂಗ್ ಒಂದೇ ಸಾಕು. ಚಾನಲಿಂಗ್ ಸಮಯದಲ್ಲಿ, ಬೆಳಕನ್ನು ನಿಮ್ಮ ಮೂಲಕ ಹರಿಯಲು ಬಿಟ್ಟಾಗ, ನೀವು ಬೆಳಕಿನ ಅನುಭವವನ್ನು ಕೂಡ ಮಾಡಬೇಕು. ಇದು ಅತ್ಯಂತ ಮುಖ್ಯವಾದ ಅಂಶ. ಇದು ಧ್ಯಾನ ಮತ್ತು ಲೈಟ್ ಚಾನಲಿಂಗ್ ಎರಡೂ ಕೂಡ ಎಂದು ನಾವು ಹೇಳಬಹುದು. ಬೆಳಕು ತನ್ನಲ್ಲಿ ಪ್ರೀತಿ, ಶಾಂತಿ ಹಾಗೂ ಎಲ್ಲಾ ಸಕಾರಾತ್ಮಕತೆಗಳನ್ನು ಹೊಂದಿರುವುದರಿಂದ, ಇವೆಲ್ಲವನ್ನು ನೀವು ಸಹ ಅನುಭವಿಸುವಿರಿ. ನಮ್ಮ ಕರ್ಮಗಳನ್ನು ನಿವಾರಿಸಿ ನಮ್ಮನ್ನು ಮುಕ್ತರನ್ನಾಗಿಸಲು ಇವು ಸಾಕು.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಸುನಿಲ್ ಬಿ**

ಶಾಲೆಯೊಂದರಲ್ಲಿ, ಲೈಟ್ ಚಾನಲಿಂಗ್ ಸೆಷನ್ ಮುಗಿದ ನಂತರ, ಒಬ್ಬ ಪುಟ್ಟ ಬಾಲಕಿ ನಮ್ಮ ಕಾರ್ಯಕರ್ತರೊಂದಿಗೆ ಮುಗ್ಧತೆಯಿಂದ ಮಾತನಾಡಿದಳು. "ನಾನು ಸಾಮಾನ್ಯವಾಗಿ ಖಿನ್ನಳಾಗಿರುತ್ತೇನೆ. ಆದರೆ ಈಗ ಲೈಟ್ ಚಾನಲ್ ಮಾಡಿದ ನಂತರ, ಬಹಳ ಸಂತೋಷವಾಗಿದ್ದೇನೆ," ಎಂದು ಹೇಳಿದಳು. ನಮ್ಮ ಕಾರ್ಯಕರ್ತರು ಇದನ್ನು ನಮಗೆ ತಿಳಿಸಿದಾಗ ನಾನು ಮೂಕವಿಸ್ಮಿತನಾದೆ. ಬೆಳಕು ಸೂಕ್ಷ್ಮ ಮಟ್ಟದಲ್ಲಿ ಈ ಹುಡುಗಿಯ ಜತೆ ಮಾತನಾಡಿದೆ ಎಂದು ನನ್ನ ಅನಿಸಿಕೆ ಹಾಗೂ ನಂಬಿಕೆ. ಸ್ಥೂಲ ಮಟ್ಟದಲ್ಲಿ ಈ ಸಂವಹನದ ಅರಿವು ಅವಳಿಗಿಲ್ಲದಿರಬಹುದು, ಆದರೆ ಈ ಸಂವಹನ ಅವಳ ಮುಖದ ಮೇಲೆ ಮಂದಹಾಸ ಮೂಡಿಸಿತು.

ಬೆಳಕಿಗೆ ಪ್ರತಿಯೊಬ್ಬ ವ್ಯಕ್ತಿಯ ಬಗ್ಗೆಯೂ ಕಾಳಜಿ ಇದೆ. ಈ ಸರಳವಾದ ತಂತ್ರದ ಅಭ್ಯಾಸವು ನಮ್ಮನ್ನು ಬೆಳಕಿನ ಸಂಪರ್ಕಕ್ಕೆ ತರುತ್ತದೆ; ದೇವರ ಸಂಪರ್ಕಕ್ಕೆ ತರುತ್ತದೆ. ಅವನು ತನ್ನದೇ ಆದ ಅಪೂರ್ವ ರೀತಿಯಲ್ಲಿ ಯಾವಾಗಲೂ ಪ್ರತಿಸ್ಪಂದಿಸುತ್ತಾನೆ!!

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಸುನಿಲ್ ಬಿ**

ನಮಗೆಲ್ಲ 14ನೇ ವಿಶ್ವ ಚಾನಲ್ ದಿನವು, ವಿನೀತರನ್ನಾಗಿಸುವ ಒಂದು ಅನುಭವವಾಗಿತ್ತು. ಪ್ರತಿ ಹೆಜ್ಜೆಯಲ್ಲೂ ಈ ಯೋಜನೆಯ ಹಿಂದಿರುವ ನಮ್ಮ ಮಾಸ್ಟರ್‌ಗಳು ನಮಗೆ ಮಾರ್ಗದರ್ಶನ ನೀಡುತ್ತಿದ್ದರು. ನಾವು ಅವರ ಕೈಯಲ್ಲಿನ ಒಂದು ಸಾಧನ ಮಾತ್ರ. ನಾವು ಅವರಲ್ಲಿ ಶರಣಾದಾಗ ಅವರು ನಮ್ಮನ್ನು ನಮ್ಮ ಗುರಿಯ ಕಡೆಗೆ ಕೊಂಡೊಯ್ಯುತ್ತಾರೆ ಮತ್ತು ಗುರಿ ತಲುಪಿಸುತ್ತಾರೆ ಎಂದು ನನ್ನ ನಂಬಿಕೆ. ಈ ಕೆಲಸದಲ್ಲಿ ಭಾಗಿಗಳಾಗಿರುವುದು ನಮ್ಮ ಸೌಭಾಗ್ಯ.

ಅಂದು, ನಮ್ಮ ದಿನ ಪ್ರಾತಃಕಾಲ 6 ಗಂಟೆಗೆ ಆರಂಭವಾಗಿ ರಾತ್ರಿ 9:30ಕ್ಕೆ ಮುಗಿಯಿತು. ಇಡೀ ದಿನ, ಭಾರತದ ವಿವಿಧ ಭಾಗಗಳಲ್ಲಿ ನೂರಾರು ಸೆಷನ್‌ಗಳನ್ನು ಕಾರ್ಯಕರ್ತರು ನಡೆಸಿದರು. ಅನೇಕ ಕಾರ್ಯಕರ್ತರು, ನೂರಾರು ಮೈಲಿ ಪ್ರಯಾಣಿಸಿ ಹೊರವಲಯದಲ್ಲಿರುವ ಪ್ರದೇಶಗಳಲ್ಲಿ ಸೆಷನ್‌ಗಳನ್ನು ನಡೆಸಿದರು. ಆನಂದದಾಯಕವಾದ 6 ಆನ್‌ಲೈನ್ ಸೆಷನ್‌ಗಳನ್ನು ಮಾನಸ ಫೌಂಡೇಶನ್‌ನಲ್ಲಿ ನಡೆಸಲಾಯಿತು.

ನಮ್ಮ ಈ 15 ವರ್ಷಗಳ ಪಯಣದಲ್ಲಿ ನಮ್ಮ ಅವಿಭಾಜ್ಯ ಅಂಗಗಳಾದ ಎಲ್ಲ ಲೈಟ್ ಚಾನಲ್‌ಗಳಿಗೆ ಧನ್ಯವಾದಗಳು.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

**ಅನು: ಕಾಂಚನಲತಾ**

- ಪ್ರಾಮಾಣಿಕತೆಯು ಕೇವಲ ಧ್ಯಾನದಲ್ಲಿ ಮಾತ್ರವಲ್ಲ, ಅದು ಎಲ್ಲೆಡೆಯೂ ಸಹಾಯ ಮಾಡುತ್ತದೆ. ನೀವು ಮಾಡುವ ಧ್ಯಾನದಲ್ಲಿ ಪ್ರಾಮಾಣಿಕರಾಗಿದ್ದರೆ ಶೀಘ್ರವಾಗಿ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸುವಿರಿ.
- ಭಕ್ತಿಯು ನಮ್ಮಲ್ಲಿರುವ ಅತ್ಯುತ್ತಮವಾದುದನ್ನು ಹೊರ ತರುತ್ತದೆ – ಪ್ರೀತಿ, ವಿನಮ್ರತೆ, ಶರಣಾಗತಿ, ನಿಸ್ವಾರ್ಥ. ಅದು ನಮ್ಮ ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಸಂಸ್ಕರಿಸುತ್ತದೆ.
- ನಾವು ಪ್ರೀತಿ ಮತ್ತು ಶಾಂತಿಯನ್ನು ಪ್ರಕಟಪಡಿಸಿದಾಗ, ವೈರಾಗ್ಯ ಸಹಜವಾಗಿಯೇ ನಮಗೆ ಬರುತ್ತದೆ ಹಾಗೂ ನಾವು ಬಹು ಬೇಗ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸುತ್ತೇವೆ.
- ನಾವು ಯಾವುದನ್ನೂ, ಒಳ್ಳೆಯದನ್ನೂ ಸಹ, ಇತರರ ಮೇಲೆ ಹೇರಬಾರದು ಎಂಬ ಆಧ್ಯಾತ್ಮಿಕ ನಿಯಮ–ವೊಂದಿದೆ.
- ಒಂದು ನಿರ್ದಿಷ್ಟವಾದ ಗುರಿಯನ್ನು ಸಾಧಿಸುವುದಕ್ಕಾಗಿ ಶರೀರ, ಮನಸ್ಸು ಮತ್ತು ಬುದ್ಧಿಯಿಂದ ಕೂಡಿದ ನಮ್ಮ ಇಡೀ ಶಾರೀರಕ ವ್ಯವಸ್ಥೆಯನ್ನು ಸಜ್ಜುಗೊಳಿಸುವುದನ್ನು ಗಾಢವಾದ ಆಸಕ್ತಿ (Passion) ಎನ್ನುತ್ತಾರೆ. ಕಲಾವಿದರು, ಸಂಗೀತಗಾರರು, ವಿಜ್ಞಾನಿಗಳು ಹಾಗೂ ಧ್ಯಾನಿಗಳು ಈ ಗಾಢವಾದ ಆಸಕ್ತಿಯನ್ನು ಹೊಂದಿರಬೇಕು.
- ಪ್ರತಿಯೊಂದನ್ನೂ ಭಗವಂತನ ಉಡುಗೊರೆ ಎಂದು ನಾವು ಸ್ವೀಕರಿಸಿದರೆ, ಯಾವುದೇ ಬಗೆಯ ತೊಂದರೆಗಳು ಇರುವುದಿಲ್ಲ.
- ಸಮತಲ (horizontal) ಜೀವನವು ನ್ಯೂನತೆಗಳಿಂದ ತುಂಬಿದೆ; ನಮ್ಮಲ್ಲೂ ಸಹ ನ್ಯೂನತೆಗಳಿವೆ. ಇವೆಲ್ಲವನ್ನೂ ಅರಿತುಕೊಂಡು, ನಾವು ಕೆಳಮಟ್ಟದ ಆಲೋಚನೆಗಳು ಮತ್ತು ಭಾವನೆಗಳಿಂದ ಮುಕ್ತಿ ಹೊಂದಲು ಉನ್ನತ ಮಟ್ಟದಲ್ಲಿ ಜೀವಿಸಬೇಕು.
- ನಮ್ಮ ಹಿಂದಿನ ಕರ್ಮಗಳನ್ನು ನಿವಾರಿಸಿಕೊಳ್ಳುವ ಮೂಲಕ ನಾವು ನಮ್ಮ ವಿಧಿಗಳನ್ನು ಸೃಷ್ಟಿಸಿಕೊಳ್ಳಬಹುದು. ಧ್ಯಾನದ ಮೂಲಕ ನಮ್ಮ ಕರ್ಮಗಳನ್ನು ನಿವಾರಿಸಿಕೊಳ್ಳಬಹುದು.
- ಚಾನೆಲ್ ಮಾಡುವಾಗ ನಾವು ಬೆಳಕನ್ನು ಅನುಭವಿಸ–ಬಹುದು ಹಾಗೂ ಪ್ರಶ್ನೆಗಳನ್ನೂ ಕೇಳಬಹುದು. ಬೆಳಕಿನೊಂದಿಗೆ ಸಂವಹನ ಮಾಡಲು ಇದು ಅತಿ ಸೂಕ್ತ ಸಮಯವಾಗಿದೆ.
- ವ್ಯಾಮೋಹವಿಲ್ಲದ ಸಂಬಂಧವು ಸುಂದರವಾದುದು ಏಕೆಂದರೆ ಅದರಲ್ಲಿ ಯಾವುದೇ ಒತ್ತಡ ಅಥವಾ ಬೇಡಿಕೆಗಳಿರುವುದಿಲ್ಲ. ಅಲ್ಲಿ ಪರಸ್ಪರ ನಂಬಿಕೆ ಮತ್ತು ಗೌರವವಿರುತ್ತದೆ. ಅತ್ಯಂತ ಸುಂದರವಾದ ಸಂಬಂಧ–ವೆಂದರೆ ಗುರು ಮತ್ತು ಶಿಷ್ಯನ ನಡುವಿನ ಸಂಬಂಧ.
- ಭೂಮಿಯ ಮೇಲೆ ಏನೇ ನಡೆದರೂ ಅದರ ಪ್ರಭಾವವು ನಮ್ಮ ಮೇಲೆ ಆಗುತ್ತದೆ ಹಾಗೂ ಜಗತ್ತಿನ ಯಾವುದೇ ಭಾಗದಲ್ಲಿ ನಡೆಯುವ ಗಲಭೆಯ ಒಂದು ಅಲ್ಪ ಪ್ರಮಾಣದ ಕರ್ಮಗಳು, ನೋವು ಮತ್ತು ಯಾತನೆ–ಯನ್ನೂ ನಾವು ಸ್ವೀಕರಿಸಲೇಬೇಕು ಎಂಬುದನ್ನು ನಾವು ಅರಿತಿರಬೇಕು.

–ಗುರೂಜಿ ಕೃಷ್ಣಾನಂದ

## 14ನೇ ವಿಶ್ವ ಚಾನಲ್ಸ್ ದಿನದ ಫೋಟೋಗಳು



ವಿಶಾಖಪಟ್ಟಣದ ಶಾಲೆಯೊಂದರ ವಿದ್ಯಾರ್ಥಿಗಳು 14ನೇ ವಿಶ್ವ ಚಾನಲ್ಸ್ ದಿನವಾದ ಫೆಬ್ರುವರಿ 1, 2024ರಂದು ಲೈಟ್ ಚಾನಲ್ ಮಾಡುತ್ತಿರುವುದು.



ಚೆನ್ನೈನ ಶಾಲೆಯೊಂದರ ವಿದ್ಯಾರ್ಥಿಗಳು 14ನೇ ವಿಶ್ವ ಚಾನಲ್ಸ್ ದಿನವಾದ ಫೆಬ್ರುವರಿ 1, 2024ರಂದು ಲೈಟ್ ಚಾನಲ್ ಮಾಡುತ್ತಿರುವುದು.



14ನೇ ವಿಶ್ವ ಚಾನಲ್ಸ್ ದಿನದ ಯಶಸ್ಸಿನ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ ಕಾರ್ಯಕರ್ತರು

# 14ನೇ ವಿಶ್ವ ಚಾನಲ್ಸ್ ದಿನದ ವರದಿ

**ಮನೋಜ್ ಕುಮಾರ್ ಚೋಪ್ರಾ; ಅನು: ಕಾಂಚನಲತಾ**

ನಿಮಗೆ ಏನಾದರೂ ಬೇಕಿದ್ದಲ್ಲಿ, ಅದನ್ನು ಪಡೆದುಕೊಳ್ಳಲು ನಮಗೆ ಸಹಾಯ ಮಾಡಲು ಇಡೀ ಬ್ರಹ್ಮಾಂಡವೇ ತಂತ್ರ ಹೂಡುತ್ತದೆ, ಎಂಬುದು ಪಾಲೊ ಕೊಯೆಲೊ ಅವರ ಹೆಸರಾಂತ ಉಲ್ಲೇಖಗಳಲ್ಲಿ ಒಂದಾಗಿದೆ. ನಮ್ಮ ಉದ್ದೇಶವು ಉನ್ನತವಾಗಿದ್ದು ಮತ್ತು ನಿಸ್ವಾರ್ಥದ್ದಾಗಿದ್ದರೆ, ನಮಗೆ ಸಹಾಯ ಮಾಡಲು ಎಲ್ಲಾ ಸಕಾರಾತ್ಮಕ ಬಲಗಳೂ ಕೂಡಾ ನಮ್ಮ ಪ್ರಯತ್ನಕ್ಕೆ ಕೈ ಜೋಡಿಸುತ್ತವೆ. ಜಗತ್ತಿಗೆ ಉತ್ತಮ ಭವಿಷ್ಯವನ್ನು ಸೃಷ್ಟಿಸುವ ಉದ್ದೇಶಕ್ಕಾಗಿ ದೈವೀ ಬೆಳಕನ್ನು ಕೆಳಗೆ ತರಲು ನಮ್ಮ ಸಮರ್ಪಿತ ತಂಡಗಳು ಶ್ರಮ ಪಡುವಾಗ, ಪ್ರತಿ ವರ್ಷದ ವಿಶ್ವ ಚಾನಲ್ಸ್ ದಿನ (ವರ್ಲ್ಡ್ ಚಾನೆಲ್ಸ್ ಡೇ) ಹೀಗೆಯೇ ಆಗುತ್ತದೆ.

ವಿಶ್ವ ಚಾನಲ್ಸ್ ದಿನದಂದು, ನಮ್ಮ ಕಾರ್ಯಕರ್ತರು, 1600ಕ್ಕೂ ಹೆಚ್ಚು ಶಾಲೆಗಳಲ್ಲಿ, ಏಳು ಲಕ್ಷಕ್ಕೂ ಹೆಚ್ಚು ಮಕ್ಕಳು ಬೆಳಕನ್ನು ಚಾನೆಲ್ ಮಾಡುವ ಹಾಗೆ ಮಾಡಿದರು. ಆರು ಆನ್‌ಲೈನ್ ಸೆಷನ್‌ಗಳು ಪ್ರಭಾವಶಾಲಿ ಹಾಗೂ ತೀವ್ರವಾಗಿತ್ತು. ಅಂದು ಸಂತೋಷ ಮತ್ತು ಆನಂದದಿಂದ ಕೂಡಿದ ಧನ್ಯವಾದ ದಿನವಾಗಿತ್ತು. ನಮ್ಮ ಕಾರ್ಯಕರ್ತರ ಶ್ರಮವು ಮಹರ್ಷಿ ಅಮರರವರಿಗೆ ಹೃದಯಸ್ಪರ್ಶಿಯಾಗಿತ್ತೆಂದು ನನಗೆ ಖಾತ್ರಿಯಿದೆ. ನಮ್ಮ ಕಾರ್ಯಕರ್ತರು ತಮ್ಮ ತನು-ಮನಗಳಿಂದ ಬೆಳಕಿನ ಯೋಧರಂತೆ, ಕಿಂಚಿತ್ತೂ ಲೋಪವಿಲ್ಲದಂತೆ ಕೆಲಸ ಮಾಡಿದ್ದಾರೆ. ಗುರೂಜಿಯವರು ಇವರನ್ನು ನಿರ್ಭಯ ದೇವದೂತರೆಂದು ಕರೆಯುತ್ತಿದ್ದರು ಹಾಗೂ ಅದು ಇವರಿಗೆ ಅತ್ಯಂತ ಸಮರ್ಪಕವಾಗಿ ಹೊಂದುತ್ತದೆ.

ತಮ್ಮದೇ ಆದ ಸವಾಲುಗಳಿದ್ದರೂ, ಶಾಲೆಗಳು ನಮ್ಮ ಕಾರ್ಯಕರ್ತರನ್ನು ಅತ್ಯಂತ ಆದರಾಭಿಮಾನಗಳಿಂದ ಸ್ವಾಗತಿಸಿದರು. ಸೆಷನ್‌ಗಳನ್ನು ನಡೆಸಿದ ನಂತರ ನೂರಾರು ಶಾಲೆಗಳು ಫೋಟೋಗಳನ್ನು ಮತ್ತು ವಿಡಿಯೋಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ವಿಶ್ವ ಚಾನಲ್ಸ್ ದಿನವನ್ನು ಕುರಿತ ಅವರ ಸಂತೋಷ ಮತ್ತು ಹುಮ್ಮಸ್ಸನ್ನು ನಾವು ಅವರ ಫೋಟೋ ಮತ್ತು ವಿಡಿಯೋಗಳ ಮೂಲಕ ಗುರುತಿಸಬಹುದಾಗಿತ್ತು. ಅವರ ಬೆಂಬಲವಿಲ್ಲದಿದ್ದರೆ ಬೆಳಕಿನ ಸಂಚಲನವು ಯಶಸ್ವಿಯಾಗುತ್ತಿರಲಿಲ್ಲ ಎಂದು ನಾನು ಪ್ರಾಮಾಣಿಕವಾಗಿ ಅಂದುಕೊಳ್ಳುತ್ತೇನೆ. ಮಕ್ಕಳೂ ಕೂಡಾ ನಮ್ಮನ್ನು ಒಂದು ದೈವಿಕ ಮುಗುಳ್ನಗೆಯೊಂದಿಗೆ ಸ್ವಾಗತಿಸಿದರು ಮತ್ತು ಬೆಳಕನ್ನು ಸುಂದರವಾಗಿ ಚಾನೆಲ್ ಮಾಡಿದರು. ಅವರು ನಮ್ಮ ಭವಿಷ್ಯದ ಭರವಸೆ.

ಸುಮಾರು ಒಂದು ನೂರು ಕಾರ್ಯಕರ್ತರು ಭಾರತ ಮತ್ತು ವಿದೇಶದುದ್ದಕ್ಕೂ ಕೆಲಸ ಮಾಡಿದರು. ನಾವು ದೇಶದ ವಿವಿಧ ಭಾಗಗಳಾದ ನವದೆಹಲಿ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಉತ್ತರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಲೈಟ್ ಚಾನೆಲಿಂಗ್ ಮಾಡಿದೆವು. ನಮಗೆ ಮಲೇಷಿಯಾದಲ್ಲಿ ಆನ್‌ಲೈನ್ ಸೆಷನ್‌ಅನ್ನು ಮಾಡಲು ಸಾಧ್ಯವಾಯಿತು ಮತ್ತು ನಮ್ಮ ನೇರ ಆನ್‌ಲೈನ್ ಪ್ರಸಾರದಲ್ಲಿ ಪ್ರಪಂಚದ ವಿವಿಧ ಭಾಗಗಳಿಂದ ನೂರಾರು ಜನರು ಭಾಗವಹಿಸಲು ಸಾಧ್ಯವಾಯಿತು.

ಕಾರ್ಯಕರ್ತರ ಪ್ರಯಾಸಗಳ ಮತ್ತು ತ್ಯಾಗಗಳ ಕಥೆಗಳು ಯಾವುದೇ ಚರಿತ್ರೆಯಲ್ಲಿಯೂ ದಾಖಲಾಗದೇ ಇರಬಹುದು ಆದರೆ ಋಷಿಗಳು ಗಮನಿಸುತ್ತಾರೆ ಮತ್ತು ಜಗತ್ತಿನ ಯಾವುದೋ ಭಾಗದಲ್ಲಿ ಕೆತ್ತಲಾಗುತ್ತದೆ. ನಿಸ್ವಾರ್ಥ ಕೆಲಸವು ಮುಂದಿನ ಪೀಳಿಗೆಗಳನ್ನು ಪ್ರೇರೇಪಿಸುತ್ತವೆ ಮತ್ತು ಸೃಷ್ಟಿಕರ್ತನಿಂದ ಮೌನವಾದ ಮೆಚ್ಚುಗೆಯನ್ನು ಆಕರ್ಷಿಸುತ್ತದೆ ಎಂದು ನನಗೆ ಖಚಿತವಾಗಿದೆ.

ವಿಶ್ವ ಸಂಚಲನದ ದಿನದ ನಂತರ ಯಾವುದೇ ತೀವ್ರವಾದ ಬದಲಾವಣೆಯನ್ನು ನಾವು ನೋಡದಿರಬಹುದು ಆದರೆ ಇದು ಖಂಡಿತವಾಗಿ ಜಗತ್ತಿನ ಮೇಲೆ ಪ್ರಭಾವ ಬೀರುತ್ತದೆ. ನಾವು ಕೇವಲ ಒಂದು ವ್ಯಕ್ತಿಯ ನೋವನ್ನಾದರೂ ಕಡಿಮೆ ಮಾಡಿ ಆತನಲ್ಲಿ ಭರವಸೆ ತುಂಬಿದ್ದಾದರೆ, ನಾವು ನಮ್ಮ ಕೆಲಸದ ಬಗ್ಗೆ ತೃಪ್ತಿ ಹೊಂದಬಹುದು. ನಾವು ಕೇವಲ ಚಾನೆಲ್‌ಗಳು ಎಂಬುದನ್ನು ನಾವು ಸದಾ ನೆನಪಿನಲ್ಲಿಟ್ಟುಕೊಂಡಿದ್ದೇವೆ; ಬೆಳಕಿಗೆ ಕೆಲಸ ಮಾಡುವುದು ಹೇಗೆ ಮತ್ತು ಹರಡುವುದು ಹೇಗೆ ಎಂಬುದು ತಿಳಿದಿದೆ. ಬೆಳಕು ನಮ್ಮ ಮುಂದಿನ ಮಾರ್ಗವನ್ನು ನಮಗೆ ತೋರಿಸುತ್ತದೆ. ನವಯುಗದ ಕನಸು ಬೆಟ್ಟದ ಗಾತ್ರದ ಕಾರ್ಯ. ಇದು ಒಂದು ದೀರ್ಘವಾದ ಯೋಜನೆ. ನಾವು, ಮಾನವಕುಲವಾಗಿ, ಈ ಬದಲಾವಣೆಗಳನ್ನು ನಮ್ಮ ಮೂಲಕ ಪ್ರಕಟಪಡಿಸುವ ಹೊಣೆಗಾರಿಕೆ ನಮಗೆ ಇದೆ. ನಾವು ಬಹುಪಾಲು ಮಂದಿ ಇದನ್ನು ಮಾಡಬಹುದಾದರೆ, ನವಯುಗವು ದೂರವಿಲ್ಲ ಎಂದು ನನಗನಿಸುತ್ತದೆ.

ನಾವು, ಶಾಲಾ ಅಧಿಕಾರಿಗಳಿಗೆ, ಶಿಕ್ಷಕರಿಗೆ, ಮಕ್ಕಳಿಗೆ ಹಾಗೂ ಎಲ್ಲಾ ಲೈಟ್ ಚಾನೆಲ್‌ಗಳಿಗೆ, ವಿಶ್ವ ಚಾನಲ್ಸ್ ದಿನದಂದು ಬೆಳಕನ್ನು ಚಾನೆಲ್ ಮಾಡಿದ್ದಕ್ಕಾಗಿ ವಂದನೆಗಳನ್ನು ತಿಳಿಸುತ್ತೇವೆ. ಈ ಆಂದೋಲನ ಮುಂದುವರೆಯಲು ನಿಮ್ಮ ಬೆಂಬಲ ನಮಗೆ ಅತ್ಯಮೂಲ್ಯವಾಗಿದೆ. ■

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯ ಪ್ರಾರ್ಥನಾ ಸಮಯದಲ್ಲಿ ಅಥವಾ ಆನ್‌ಲೈನ್ ತರಗತಿಗಳ ಪ್ರಾರಂಭದಲ್ಲಿ ಅಥವಾ ಇನ್ನಾವುದೇ ಸಮಯದಲ್ಲಿ ಬೆಳಕನ್ನು ಪ್ರತಿನಿತ್ಯ 3 ರಿಂದ 7 ನಿಮಿಷಗಳ ಕಾಲ ಚಾನಲ್ ಮಾಡಿಸು-ವುದರ ಮೂಲಕ ಲೈಟ್‌ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5877 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 30.04 ಲಕ್ಷ |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಶಾಲೆಗಳು | : | 550 |
| ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಮಕ್ಕಳು | : | 2.37 ಲಕ್ಷ |

ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.









# 14ನೇ ವಿಶ್ವ ಚಾನಲ್ಸ್ ದಿನದ ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ

ನೆನ್ನೆ (ವಿಶ್ವ ಚಾನೆಲ್ಸ್ ದಿನ) ಒಂದು ವಿಶೇಷವಾದ ಘಟನೆ ಸಂಭವಿಸಿತು. ಅತ್ಯಂತ ಶಕ್ತಿಯುತವಾಗಿರುವ ಮತ್ತು ಸುಂದರವಾಗಿರುವ ಚೈತನ್ಯಗಳ ನಿರಂತರ ಸುರಿಮಳೆ ಶುರುವಾಯಿತು. ನನಗೆ ಒಮ್ಮೆ ಗಂಟಲು ನೋವು ಬಂದರೆ, ಸಾಮಾನ್ಯವಾಗಿ ಒಂದು ತಿಂಗಳ ಕಾಲ ಅನಾರೋಗ್ಯವನ್ನು ಅನುಭವಿಸುತ್ತೇನೆ ಮತ್ತು ಅದರ ಪರಿಣಾಮವಾಗಿ ಎರಡು ತಿಂಗಳ ಕಾಲ ಕೆಮ್ಮು ಇರುತ್ತದೆ. ಆದರೆ ಈ ಸಲ ನಾನು 24 ಗಂಟೆಯೊಳಗೆ ಚೇತರಿಸಿಕೊಂಡೆ. ಫೆಬ್ರವರಿ 1ರ ರಾತ್ರಿ ನಾನು ಆರೋಗ್ಯವಾಗಿದ್ದೆ... ದೊಡ್ಡದಾಗಿ ಆಗಲು ಸನ್ನಿಹಿತವಾಗಿದ್ದ ಪರಿಸ್ಥಿತಿಯಿಂದ ಒಂದು ಚಿಕ್ಕ ಪವಾಡ ಜರುಗಿತು. ನಾವೆಲ್ಲರು ಬೆಳಕಿನ ಜೊತೆ ಇರುವುದನ್ನು ಮುಂದುವರೆಸೋಣ...

–ವಿದ್ಯಾ ವಿಶ್ವಾಮಿತ್ರ, ಲೈಟ್ ಚಾನೆಲ್

ಇದೆಲ್ಲಾ ಋಷಿಗಳ ಅನುಗ್ರಹದಿಂದ ಜರುಗಿತು. ನವದೆಹಲಿಯಲ್ಲಿ ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ಮಾಡುವಾಗ ನನಗೆ ಮಾಸ್ಟರ್ ವಿ ಅವರ ಇರುವಿಕೆಯ ಅನುಭವ ಸ್ಪಷ್ಟವಾಗಿ ಗೋಚರಿಸಿತು. ಕೊನೆಯ ಸೆಷನ್ ಮಧ್ಯಾಹ್ನ 1 ಗಂಟೆಗೆ ನಡೆಸಲಾಯಿತು. ಸಭಾಂಗಣದಲ್ಲಿ ಶಾಂತಭರಿತ ಮೌನವಿತ್ತು ಮತ್ತು ಮಕ್ಕಳು ಮಾತನಾಡಲು ಬಯಸದೆ ಸಂಪೂರ್ಣವಾಗಿ ಪ್ರಶಾಂತರಾಗಿದ್ದಂತೆ ಕಂಡರು. ಪ್ರಾಂಶುಪಾಲರು ತಮಗಾದ ಬೆಳಕಿನ ಅನುಭವವನ್ನು ಹಂಚಿಕೊಳ್ಳಲು ತುಂಬಾ ಉತ್ಸುಕರಾಗಿದ್ದರು, ನಂತರ ಲೈಟ್ ಚಾನೆಲಿಂಗ್ ಮಾಡುವುದರ ಮೂಲಕ ಜೀವನದಲ್ಲಿ ಬೆಳಕಿನ ಜೊತೆ ಹೇಗೆ ಶ್ರುತಿಗೊಳ್ಳಬಹುದೆಂದು ವಿದ್ಯಾರ್ಥಿಗಳಿಗೆ ವಿವರಿಸಿದರು.

–ಜಸ್‌ಪ್ರೀತ್ ಕೌರ್, ಲೈಟ್ ಚಾನೆಲ್ ಕಾರ್ಯಕರ್ತೆ

ನನ್ನ ಗೆಳತಿ ಶಿಲ್ಪ ಫೆಬ್ರವರಿ 1 ರಂದು ತನಗಾದ ಅನುಭವವನ್ನು ನನ್ನ ಜೊತೆ ಹಂಚಿಕೊಂಡಳು. “ನೀನು ಅನೇಕ ಸಾರಿ ನನಗೆ ಲೈಟ್ ಚಾನೆಲಿಂಗ್ ಬಗ್ಗೆ ಹೇಳುತ್ತಿದ್ದೆ ಆದರೆ ನನಗೆ ಮಾಡುವುದಕ್ಕೆ ಆಗಿರಲಿಲ್ಲ. ಇವತ್ತು ಸಾಯಂಕಾಲ 7ಕ್ಕೆ ಪ್ರಾರಂಭವಾದ ಮರಾಠಿ ಸೆಷನ್‌ನ ನೇರಪ್ರಸಾರದಲ್ಲಿ ಭಾಗವಹಿಸಿದೆ ಮತ್ತು ಜಯಂತ್ ಸರ್ ಕೊಟ್ಟ ಸೂಚನೆಗಳನ್ನು ಅನುಸರಿಸಿದೆ. ಲೈಟ್ ಚಾನೆಲಿಂಗ್ ಮಾಡುವಾಗ ನಾನು ಬೇರೆ ಲೋಕದಲ್ಲಿ ಇದ್ದಂತೆ ಅನಿಸಿತು. ಹಿಂದೆ ಎಂದೂ ಅನುಭವಿಸದ ಶಾಂತಿಯ ಅನುಭವ–ವಾಯಿತು. ಆ ಅನುಭವವು ಎಷ್ಟು ಆಳವಾಗಿತ್ತೆಂದರೆ ಅದರಿಂದ ಹೊರಗೆ ಬರಲು ಸ್ವಲ್ಪ ಕಾಲ ಸಾಧ್ಯವಾಗಲಿಲ್ಲ. ಈಗ ನಾನು ಪ್ರತಿ ದಿನ 10 ನಿಮಿಷ ಲೈಟ್ ಚಾನಲ್ ಮಾಡುತ್ತಿದ್ದೇನೆ,” ಎಂದು ಅವಳು ಹೇಳಿದಳು.

– ಪ್ರತಿಭಾ ಓಕ್, ಲೈಟ್ ಚಾನೆಲ್ ಕಾರ್ಯಕರ್ತೆ

ಫೆಬ್ರವರಿ 1ರಂದು ತಮ್ಮ ಶಾಲೆಯಲ್ಲಿ ಲೈಟ್ ಚಾನೆಲಿಂಗ್ ಸೆಷನ್ ಮಾಡಿಸಿದ ಐ.ಟಿ.ಐ ಸೆಂಟ್ರಲ್ ಶಿಕ್ಷಕರೊಬ್ಬರು ಈ ರೀತಿಯಾಗಿ ಸಂದೇಶವನ್ನು ಕಳುಹಿಸಿದ್ದಾರೆ: “ನಮ್ಮ ಶಾಲೆಯು ಲೈಟ್ ಚಾನೆಲಿಂಗ್ ಚಟುವಟಿಕೆಯನ್ನು ನಡೆಸಿತು, ಎಲ್ಲಾ ಮಕ್ಕಳು ಮತ್ತು ಸಿಬ್ಬಂದಿವರ್ಗದವರು ಮನಃಪೂರ್ವಕವಾಗಿ ಬೆಳಕನ್ನು ಹರಡಿದರು. ಮುಂಬರುವ ವರ್ಷಗಳಲ್ಲಿ ನಾವು ಬೆಳಕನ್ನು ಚಾನೆಲ್ ಮಾಡುವುದನ್ನು ಹಾಗೂ ಪ್ರಪಂಚದ ಸುತ್ತಲೂ ಹರಡುವುದನ್ನು ಮುಂದುವರೆಸುತ್ತೇವೆಂಬ ಭರವಸೆಯಿದೆ. ನಿಮಗೆ ಧನ್ಯವಾದಗಳು. ಲೋಕಾಃ ಸಮಸ್ತಾಃ ಸುಖಿನೋ ಭವಂತು.”

–ವಿಜಯ್ ಕುಮಾರ್, ಲೈಟ್ ಚಾನೆಲ್ ಕಾರ್ಯಕರ್ತ



**7 ಲಕ್ಷಕ್ಕೂ ಅಧಿಕ ಜನರು 14ನೇ ವಿಶ್ವ ಚಾನಲ್ಸ್ ದಿನವಾದ ಫೆಬ್ರುವರಿ 1, 2024 ರಂದು ಲೈಟ್ ಚಾನಲ್ ಮಾಡಿದರು.**



ಭಾಗವಹಿಸಿದ ನಿಮ್ಮೆಲ್ಲರಿಗೂ

**ಧನ್ಯವಾದಗಳು**

ಪ್ರತಿ ತಿಂಗಳ 3ನೇ ಭಾನುವಾರದಂದು ನಡೆಯುವ ಮಾರ್ಗದರ್ಶಿತ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ಸಮಯ: ಬೆಳಿಗ್ಗೆ 11 ರಿಂದ 11.30ರ ವರೆಗೆ

ನೇರ ಪ್ರಸಾರ: https://lightagemasters.com

ನಿಮ್ಮನ್ನೂ ಹೀಲ್ ಮಾಡಿಕೊಳ್ಳಿ, ಪ್ರಪಂಚವನ್ನೂ ಹೀಲ್ ಮಾಡಿ.

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ